**OS**- 525/2023 **PW**-1

**ದಿಃ17.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 5 ಮತ್ತು 7 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ ಎ ಬಿ ರವರಿಂದ.**

ಕೃಷ್ಣಪ್ಪಾ ನಲವಡೆ ಅವರ ಹೆಂಡತಿಯ ಮಾತು ಕೇಳಿ ನಾನು ಈ ದಾವಾ ಮಾಡಿರುತ್ತೇನೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಎಲ್ಲ ಆಸ್ತಿಗಳು ವಾಟ್ನಿ ಆಗಿ ಅಣ್ಣತಮ್ಮಂದಿರು ತಮಗೆ ಬಂದಂತಹ ಆಸ್ತಿಗಳನ್ನು ವಹಿವಾಟು ಮಾಡಿಕೊಳ್ಳುತ್ತಾ ಬರುತ್ತಿದ್ದಾರೆ ಎಂದರೆ ಸಾಕ್ಷಿ ಇಲ್ಲ ಸುಳ್ಳು ಎನ್ನುತ್ತಾರೆ. ನನ್ನ ತಂದೆ ಹಾಗೂ ನನ್ನ ಕಾಕಾನವರು ಸದರಿ ವಾಟ್ನಿ ಸರಿ ಇಲ್ಲವೆಂದು ಇದುವರೆಗೂ ವಾಟ್ನಿ ಪ್ರಶ್ನೆ ಮಾಡಿಲ್ಲವೆಂದರೆ ಸಾಕ್ಷಿ ನಮ್ಮ ತಂದೆಯವರ ಪರವಾಗಿ ನಾನು ಮಾಡಿರುತ್ತೇನೆ ಎನ್ನುತ್ತಾರೆ. ನಿಮ್ಮ ದಾವೆಯಲ್ಲಿ ಎಲ್ಲಿಯಾದರು ನಮ್ಮ ತಂದೆಯವರ ಪರವಾಗಿ ನಾನು ದಾವಾ ಮಾಡಿರುತ್ತೇನೆಂದು ಬರೆಸಿದ್ದೀರಾ ಎಂದರೆ ಸಾಕ್ಷಿ



ಇಲ್ಲ ಎನ್ನುತ್ತಾರೆ. ಸದರಿ ದಾವಾದಲ್ಲಿ ನಿಮ್ಮ ತಂದೆಯವರನ್ನು ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ಮಾಡಿಸುತ್ತೇನೆ ಎನ್ನುತ್ತಾರೆ. ಸದರಿ ವಾಟ್ನಿ ಪ್ರಕಾರ ಬಂದಂತಹ ಹಿಸ್ಸೆಗೆ ನಿಮ್ಮ ತಂದೆ ಹೆಸರು ಎಂಟ್ರಿ ಆಗಿದೇಯೋ ಇಲ್ಲವೋ ಎಂದರೆ ಸಾಕ್ಷಿ ಎನು ಆಗಿಲ್ಲ ಎನ್ನುತ್ತಾರೆ. ಹಿಸ್ಸೆ ದಿಸ್ಸೆ ಆದ ನಂತರ ನಮಗೆ ಬಂದಂತಹ ಹಿಸ್ಸೆಗೆ ನಮ್ಮ ಹೆಸರು ಎಂಟ್ರಿ ಮಾಡಿ ಎಂದು ಅರ್ಜಿ ನಾವೆ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಪ್ರಕಾರ ನನ್ನ ತಂದೆ ಅರ್ಜಿ ಕೊಟ್ಟಿಲ್ಲ ಆ ಕಾರಣಕ್ಕೆ ಅವರ ಹೆಸರು ಎಂಟ್ರಿ ಆಗಿಲ್ಲವೆಂದರೆ ಸಾಕ್ಷಿ ನಾನು ಈಗ ಕೂಡುತ್ತೇವೆ ಎನ್ನುತ್ತಾರೆ. ಕೃಷ್ಣಪ್ಪಾ ನಲವಡಿ ಇವರಿಗೆ ತೊಂದರೆ ಕೊಡುವ ಉದ್ದೇಪದಿಂದ ಈ ದಾವೆ ಮಾಡಿದ್ದೇವೆ ಹೊರತು ಅವರಿಂದ ಹಿಸ್ಸೆ ಕೇಳುವ ಯಾವುದೇ ಅಧಿಕಾರ ನಮಗೆ ಇಲ್ಲವೆಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

(7 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನೆ ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.)

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ